ಬೇರೆ ಸೀರೆಗಳಿಗಿಂತ ವಿಭಿನ್ನವಾಗಿ ಕಾಣುತ್ತವೆ. ಫ್ಯಾಷನ್‌ನಲ್ಲೂ ಮೇಲುಗೈ ಸಾಧಿಸುತ್ತಿವೆ.

ಈ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯರವರೆಗೆ ಎಲ್ಲರೂ ಆರಾಮವಾಗಿ ಉಟ್ಟುಕೊಳ್ಳಬಹುದು. ಹೀಗಾಗಿ ಇಂಥ ಸೀರೆಗಳು ಬಹು ಬೇಗ ಖ್ಯಾತಿ ಗಳಿಸಿವೆ. ಇದು ಸಂಪ್ರದಾಯದ ಮಿತಿಯೊಳಗೆ ಫ್ಯಾಷನ್‌ನ ಪರಿಧಿಯನ್ನೂ ಮುಟ್ಟುವ ಗುಣ ಹೊಂದಿರುವುದು ಈ ಬಗೆಯ ಉಡುಗೆ ಇಂದು ಹೆಚ್ಚು ಹೆಚ್ಚು ಜನಪ್ರಿಯಗೊಳ್ಳಲು ಕಾರಣ. ಮದುವೆ ಸಂದರ್ಭಗಳಲ್ಲೂ ಬಟ್ಟೆ, ಬಣ್ಣ, ಸ್ಟೈಲ್, ಗ್ಲಾಮರ್ ಮುಂತಾದವುಗಳ ಲೆಕ್ಕಾಚಾರದಿಂದ ಸೀರೆ ಕೊಳ್ಳುವ ಮಹಿಳೆಯರು ಹೆಚ್ಚು ಹೆಚ್ಚು ಒತ್ತು ಕೊಡುವುದು ಫ್ಯಾಷನ್‌ಗೇ.

## ಜನಪ್ರಿಯತೆಯ ಹಾದಿಯಲ್ಲಿ..

ಬೊಮ್ಕಾಯ್‌ಸೀರೆ (ಸೋನೆಪುರಿ ಸೀರೆ) ಒರಿಸ್ಸಾದಲ್ಲಿ ಅತ್ಯಂತ ಜನಪ್ರಿಯವಾಗಿರುವ ಸೀರೆ. ಒರಿಸ್ಸಾದ ಗಂಜಾಂ ಜಿಲ್ಲೆಯಲ್ಲಿರುವ ಬೊಮ್ಕಾಯ್ ಪ್ರದೇಶ ಹ್ಯಾಂಡ್‌ಲೂಮ್, ರೇಷ್ಮೆ ಸೀರೆಗಳಿಗೆ ಬಹಳ ಪ್ರಸಿದ್ಧಿ ಪಡೆದಿದೆ. ಇಲ್ಲಿನ ಭುಲಿಯ ಜನಾಂಗದವರು ಬೊಮ್ಕಾಯ್‌ಸೀರೆ ನೇಯ್ಗೆಗೆ ಹೆಸರಾದವರು. ಇದರ ಜತೆಗೆ ಸೋನೆಪುರಿ ಹ್ಯಾಂಡ್‌ಲೂಮ್ ಸೀರೆ, ದುಪ್ಪಟ್ಟಾ ಮತ್ತು ರೇಷ್ಮೆ ಸೀರೆಗಳು ಫ್ಯಾಷನೆಬಲ್ ಕೂಡ ಆಗಿರುತ್ತವೆ.

ಬಾಲಿವುಡ್ ರಾಣಿ ಐಶ್ವರ್ಯ ರೈ ತನ್ನ ಮದುವೆಯಲ್ಲಿ ಬೊಮ್ಕಾಯ್‌ಸೀರೆ ಉಟ್ಟು ಮಿಂಚಿದ್ದೇ ಈ ಸೀರೆ ಮತ್ತಷ್ಟು ಪ್ರಖ್ಯಾತಿ ಗಳಿಸಲು ಸಾಧ್ಯವಾಯಿತು. ಈ ಮದುವೆ ಸೀರೆಯನ್ನು ಫ್ಯಾಷನ್ ಡಿಸೈನರ್ ಚತುರ್ಭುಜ ಮಿಹಿರ್ ಚಿನ್ನದ ಕುಸುರಿ ಕಲೆಗಳಿಂದ ಅತ್ಯದ್ಭುತವಾಗಿ ವಿನ್ಯಾಸಗೊಳಿಸಿದ್ದರು.

ಕೈಮಗ್ಗದ ಸೀರೆ, ಸಲ್ವಾರ್, ಕಾಟನ್ ಸೀರೆ, ಸಲ್ವಾರ್ ದುಪ್ಪಟ್ಟಾಗಳಿಗೆ ಹೆಸರಾದ ಒರಿಸ್ಸಾ, ಬೊಮ್ಕಾಯ್‌ಎಂಬ ಮತ್ತೊಂದು ವಿಶಿಷ್ಟ ಸೀರೆ ವೈವಿಧ್ಯದಿಂದ ದೇಶ, ವಿದೇಶಗಳಲ್ಲಿ ಹೆಸರು ಗಳಿಸುತ್ತಿದೆ. ಬೊಮ್ಕಾಯ್‌ಸೀರೆ ಅತ್ಯಂತ ಆಕರ್ಷಕವಾಗಿದೆ, ಅಂದದ ವಿನ್ಯಾಸ, ಸುಂದರವಾದ ಬಣ್ಣಗಳಿಂದ ಮಹಿಳೆಯರ ಗಮನಸೆಳೆಯುತ್ತಿದೆ. ಕಾಟನ್ ಮತ್ತು ಸಿಲ್ಕ್ ಫ್ಯಾಬ್ರಿಕ್ ಮೇಲೆ ಇಕತ್ ಹಾಗೂ ಎಂಬ್ರಾಯಿಡರಿಗಳಿಂದ ಹದವಾಗಿ ನೇಯ್ಗೆ ಮಾಡಿರುವ ಬೊಮ್ಕಾಯ್‌ಸೀರೆಗಳು ಒರಿಸ್ಸಾ ಮಾತ್ರವಲ್ಲ ಎಲ್ಲ ರಾಜ್ಯಗಳಲ್ಲೂ, ವಿದೇಶಗಳಲ್ಲೂ ಮಹಿಳೆಯರಿಂದ ಬಹಳ ಬೇಡಿಕೆ ಗಳಿಸುತ್ತಿದೆ.



ವೆಫ್ಟ್ ಮತ್ತು ವ್ರಾಪ್ ತಂತ್ರಜ್ಞಾನಗಳಿಂದ ಈ ಸೀರೆಯನ್ನು ವಿನ್ಯಾಸಗೊಳಿಸಲಾಗುತ್ತದೆ. ಇತ್ತೀಚೆಗೆ ಮತ್ತಷ್ಟು ಅತ್ಯಾಧುನಿಕವಾದ 'ಜಾಲ' ತಂತ್ರಜ್ಞಾನದಿಂದ ಬೊಮ್ಕಾಯ್‌ಸೀರೆಗಳನ್ನು ತಯಾರಿಸಲಾಗುತ್ತಿದೆ.

ಹಾಗೆಂದು ಬೊಮ್ಕಾಯ್‌ಸೀರೆಗಳು ಇತ್ತೀಚೆಗೆ ಜನ್ಮ ತಾಳಿದ್ದಲ್ಲ. ಅಂದಾಜು ಹದಿನೆಂಟನೆ ಶತಮಾನದಿಂದಲೂ ಈ ಸೀರೆಗಳು ಚಾಲ್ತಿಯಲ್ಲಿತ್ತು. ಮಹಿಳೆಯರು ಇಷ್ಟಪಟ್ಟು ಧರಿಸಿಕೊಳ್ಳುತ್ತಿದ್ದರು. ಹೊಸ ಹೊಸ ತಂತ್ರಜ್ಞಾನ, ಆಧುನಿಕ ವಿನ್ಯಾಸ, ಆಕರ್ಷಕ ಶೈಲಿ ಹಾಗೂ ಹೆಚ್ಚುತ್ತಿರುವ ಬೇಡಿಕೆಗಳಿಂದಾಗಿ ಇಂದು ಬೊಮ್ಕಾಯ್‌ಸೀರೆಗಳು ಅತ್ಯಂತ ಜನಪ್ರಿಯವಾಗಲು ಸಹಕಾರಿಯಾಯಿತು. ಸೀರೆಯ ಮೇಲೆ



ಕೈಕುಸುರಿಯಿಂದ ಮಾಡಿದ ಕಲಾತ್ಮಕ ವಿನ್ಯಾಸದಿಂದಾಗಿ ಸೀರೆ ಮದುವೆ ಹೆಣ್ಣಿಗೂ ಮೆಚ್ಚುವಂತಿದೆ; ಮದುವೆ, ರಿಸೆಪ್ಷನ್‌ಗಳಂತಹ ಸಮಾರಂಭಗಳಿಗೆ ಉಟ್ಟುಕೊಳ್ಳಲು ಯೋಗ್ಯವಾಗಿದೆ. ರೇಷ್ಮೆ ಜರಿಗಳಿಂದ ಮಾಡಿದ ವಿನ್ಯಾಸ ಮಹಿಳೆಯರ ಮನಸೂರೆಗೊಳ್ಳುವಂತಿದೆ. ಕಡುಬಣ್ಣಗಳಿಂದ ಕೂಡಿದ ಸೀರೆ ಚಿತ್ತಾಕರ್ಷಕವಾಗಿದ್ದಲ್ಲದೆ ಸೀರೆಯ ಪಲ್ಲು ಅತ್ಯಂತ ಸೊಗಸಾಗಿದೆ.

## ಉದ್ಯೋಗಾವಕಾಶ

ಬೊಮ್ಕಾಯ್‌ಸೀರೆಗೆ ಬಹಳ ಬೇಗನೆ ಬೇಡಿಕೆ ಹೆಚ್ಚುತ್ತಿರುವುದರಿಂದ ಗಂಜಾಂ ಜಿಲ್ಲೆಯ ಬೊಮ್ಕಾಯ್‌ಪ್ರದೇಶದಲ್ಲಿ ಕೈಮಗ್ಗ ಕೆಲಸಕ್ಕಾಗಿ ಪರಿಣತರು ಬೇಕಾಗುತ್ತಾರೆ. ಹೊಲಿಗೆ, ನೇಯ್ಗೆ, ಚಿತ್ತಾರದ ವಿನ್ಯಾಸ ಮಾಡುವುದರಲ್ಲಿ ಆಸಕ್ತಿ ಇರುವ ಕಲೆಗಾರರಿಗೆ ಉದ್ಯೋಗದ ಅವಕಾಶವೂ ಸಿಗುತ್ತಿದೆ.

ಪ್ರಾದೇಶಿಕವಾಗಿ ಬೊಮ್ಕಾಯ್‌ಸೀರೆಗಳಿಗೆ 'ಬಂಧ' ಎಂಬ ಹೆಸರೂ ಇದೆ. ಇದರರ್ಥ ಅತ್ಯಂತ ವಿಶೇಷವಾದದ್ದು ಎಂದು. ಬೊಮ್ಕಾಯ್‌ಸೀರೆಗಳು ಬುಡಕಟ್ಟು ಜನರು ಧರಿಸುವ ವಿನ್ಯಾಸದಲ್ಲಿ, ಟೆಂಪಲ್ ಸ್ಟೈರ್ ವಿನ್ಯಾಸದಲ್ಲಿ, ಫ್ಲೋರಲ್ ಪ್ಯಾಟರ್ನ್, ರುದ್ರಾಕ್ಷಿ ಮಣಿಗಳಿಂದ ತಯಾರಿಸಿದ ಪಲ್ಲುಗಳಿಂದ ಕೂಡಿದ ಆಕರ್ಷಕ ವಿನ್ಯಾಸದಲ್ಲೂ ಸಿಗುತ್ತದೆ. ಇನ್ನೂ ಕೆಲವು ರೇಷ್ಮೆ ಸೀರೆಯ ಸೆರಗಿನ ಮೇಲೆ ಚಿತ್ತಾರ ಬಿಡಿಸಲಾಗಿದೆ. ಅಲ್ಲದೆ ಮೀನು, ಕಮಲ, ಆಮೆ ಮತ್ತು ಹಕ್ಕಿಗಳ ಮಾದರಿಯನ್ನು ನೂಲಿನ ಸಹಾಯದಿಂದ ಪಡಿಯಚ್ಚು ಮೂಡಿಸಲಾಗಿದ್ದು ಅತ್ಯಂತ ಆಕರ್ಷಕವಾಗಿದೆ. ಸೆಲೆಬ್ರಿಟಿಗಳು, ಸಿನಿಮಾ ತಾರೆಯರು ಬೊಮ್ಕಾಯ್‌ಸೀರೆಯನ್ನು ಮೆಚ್ಚಿಕೊಂಡಿದ್ದು ಕೂಡ ಈ ಸೀರೆಯ ಬೇಡಿಕೆ ಹೆಚ್ಚಲು ಕಾರಣವಾಗಿದೆ. ಒರಿಸ್ಸಾದ ನೃತ್ಯಪಟುಗಳು ಕೂಡ ಬೊಮ್ಕಾಯ್‌ಸೀರೆಯ ಸೊಬಗನ್ನು ಅರಿತು ನೃತ್ಯ ಮಾಡುವಾಗ ಧರಿಸಲೆಂದೇ ವಿಶೇಷ ವಿನ್ಯಾಸದ ಸೀರೆಯತ್ತ ಒಲವು ತೋರಿದ್ದಾರೆ.